# ಲೋಕಲ್ ವಾಸು ಮತ್ತು ನಿಶ್ವಿಕಾ

ನಿಶ್ವಿಕಾ ನಾಯ್ಡು ಕನ್ನಡ ಚಿತ್ರರಂಗದಲ್ಲಿ ನೆಲೆ ಕಂಡುಕೊಳ್ಳಲು ಪ್ರಯತ್ನಿಸುತ್ತಿರುವ ಹೊಸ ಪ್ರತಿಭೆ. ಒಂದು ಚಿತ್ರವೂ ತೆರೆಕಾಣುವ ಮೊದಲೇ ಮೂರು ಅವಕಾಶಗಳನ್ನು ಪಡೆದಿರುವ ಚೆಲುವೆ.

'ವಾಸು ನಾನ್ ಪಕ್ಕಾ ಲೋಕಲ್', 'ಅಮ್ಮ ಐ ಲವ್ ಯು' ಹಾಗೂ 'ಪಡ್ಡೆಹುಲಿ' ನಿಶ್ವಿಕಾ ಅವಕಾಶ ಪಡೆದಿರುವ ಚಿತ್ರಗಳು. ವಾಸುವಿನಲ್ಲಿ ಅನೀಶ್ ತೇಜೇಶ್ವರ್ ನಾಯಕನಾದರೆ, 'ಅಮ್ಮ ಐ ಲವ್ ಯು' ಸಿನಿಮಾದಲ್ಲಿ ಚಿರಂಜೀವಿ ಸರ್ಜಾ ನಾಯಕ. 'ಪಡ್ಡೆಹುಲಿ'ಯಲ್ಲಿ ನಿರ್ಮಾಪಕ ಕೆ. ಮಂಜು ಅವರ ಪುತ್ರ ಶ್ರೇಯಸ್ ಗೆ ಜೋಡಿಯಾಗಿ ನಟಿಸುತ್ತಿದ್ದಾರೆ.

ಸದ್ಯಕ್ಕೆ ಅನೀಶ್ ಜೊತೆಗಿನ 'ವಾಸು ನಾನ್ ಪಕ್ಕಾ ಲೋಕಲ್' ತೆರೆ ಕಾಣುವ ಸಿದ್ಧತೆಯಲ್ಲಿದೆ. ಅಜಿತ್ ವಾಸನ್ ನಿರ್ದೇಶನದ ಈ ಚಿತ್ರದ ಟ್ರೇಲರ್ ಕಳೆದ ವಾರವಷ್ಟೇ ಬಿಡುಗಡೆಯಾಗಿದೆ. ದಿಲೀಪ್ ಚಕ್ರವರ್ತಿ ಛಾಯಾಗ್ರಹಣ ಹಾಗೂ ಅಜನೀಶ್ ಲೋಕನಾಥ್ ಸಂಗೀತ ಚಿತ್ರಕ್ಕಿದೆ. 'ತುಘಲಕ್' ಸೋಲಿನ ನಂತರ ವಾಸುವಿನ ಮಾಸ್ ಅವತಾರ ತಾಳಿರುವ ಅನೀಶ್, ಈ ಬಾರಿ ಗೆದ್ದೇ ಗೆಲ್ಲುವ ವಿಶ್ವಾಸ ಹೊಂದಿದ್ದಾರೆ. ನಟನೆಯ ಜೊತೆಗೆ ಚಿತ್ರದ ನಿರ್ಮಾಣ ಕೂಡ ಅವರದ್ದೇ.

ಪ್ರೇಮ–ಪ್ರಣಯದ ಜೊತೆಗೆ ಸಾಹಸ ಸನ್ನಿವೇಶಗಳೂ ಚಿತ್ರದಲ್ಲಿ ಸಾಕಷ್ಟಿವೆಯಂತೆ. ಯುವ ಪ್ರೇಕ್ಷಕರಿಗೆ ನಮ್ಮ ಚಿತ್ರ ಸಂಪೂರ್ಣ ರಂಜನೆ ನೀಡಲಿದೆ ಎನ್ನುವುದು ನಿರ್ಮಾಪಕರ ವಿಶ್ವಾಸ. ಪುನೀತ್ ರಾಜಕುಮಾರ್ ಗೀತೆಯೊಂದನ್ನು ಹಾಡಿರುವುದು ಚಿತ್ರದ ವಿಶೇಷಗಳಲ್ಲೊಂದು.



# ನಾಗಾಭರಣ ಕಂಡಂತೆ ಕಾನೂರು!

'ಅಲ್ಲಮ' ಚಿತ್ರದ ನಂತರ ಟಿ.ಎಸ್. ನಾಗಾಭರಣ ನಿರ್ದೇಶಿರುವ 'ಕಾನೂರಾಯಣ' ಏ. 27 ರಂದು ತೆರೆಕಾಣುತ್ತಿದೆ. ನಾಗಾಭರಣ ಪ್ರಯೋಗಶೀಲ ಚಿತ್ರಗಳಿಗೆ ಪ್ರಸಿದ್ಧರಾದವರು. ಅವರ ಕಾನೂರಿನ ಕಥನ ನಿರ್ಮಾಣದ ಹಂತದಲ್ಲೇ ವಿಭಿನ್ನವಾಗಿದೆ. 'ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸ್ವಸಹಾಯ ಸಂಘಗಳ ಒಕ್ಕೂಟ' ಚಿತ್ರವನ್ನು ನಿರ್ಮಿಸಿದ್ದಾರೆ. ಒಕ್ಕೂಟದ 20 ಲಕ್ಷ ಸದಸ್ಯರು ನಿರ್ಮಾಪಕರೆನ್ನುವುದು ಕನ್ನಡ ಚಿತ್ರೋದ್ಯಮದಲ್ಲೇ ಒಂದು ವಿಶೇಷ ಸಂಗತಿ.

ನಿಯಮಿತ ಆದಾಯವಿಲ್ಲದ ಗ್ರಾಮೀಣರ ಬದುಕಿನಲ್ಲಿ ಆರ್ಥಿಕ ಶಿಸ್ತು ತರುವುದು ಹೇಗೆ ಎನ್ನುವುದು ಚಿತ್ರದ ಕಥೆ. ಈ ಕಾಲ್ಪನಿಕ ಕಥೆಯ ಹಿಂದೆ ನಿಜ ಜೀವನದ ಹಲವು ಕಥೆಗಳೇ ಇವೆಯಂತೆ. ಒಂದು ಹಳ್ಳಿಗೆ ಏನೆಲ್ಲ ಬೇಕು? ಹಳ್ಳಿಯ ಅಭಿವೃದ್ಧಿಗೆ ಏನೆಲ್ಲ ಮಾಡಬೇಕು? ಮಹಿಳಾ ಸಂಘಗಳ ಪಾತ್ರಗಳೇನು? – ಹೀಗೆ ಸಾಗುವ ಕಥೆಯನ್ನು ನಾಗಾಭರಣ ಮನರಂಜನಾತ್ಮಕವಾಗಿ ನಿರೂಪಿಸಿದ್ದಾರಂತೆ. ಕಾದಂಬರಿಕಾರ ಹರೀಶ್ ಹಾಗಲವಾಡಿ ರಚಿಸಿರುವ ಕಥೆಯನ್ನು ನಾಗಾಭರಣ ಹಾಗೂ ಪನ್ನಗಾಭರಣ ಚಿತ್ರಕಥೆಯನ್ನಾಗಿ ರೂಪಿಸಿದ್ದಾರೆ.

ಸ್ಕಂದ ಹಾಗೂ ಸೋನುಗೌಡ ಚಿತ್ರದ ಮುಖ್ಯಪಾತ್ರಗಳಲ್ಲಿದ್ದಾರೆ. ಸೋನು ಈಗಾಗಲೇ ಹಲವು ಚಿತ್ರಗಳಲ್ಲಿ ನಟಿಸಿರುವ ಪ್ರಸಿದ್ಧ ನಟಿ. ಮಹಿಳಾಶಕ್ತಿ ಕೇಂದ್ರದಲ್ಲಿರುವ ಈ ಚಿತ್ರದಲ್ಲಿ ಅಭಿನಯಿಸಿರುವುದು ಅವರಿಗೆ ವಿಶೇಷ ಅನುಭವ ಅನ್ನಿಸಿದೆ. ಸ್ಕಂದ ಕಿರುತೆರೆಯ ಪ್ರಸಿದ್ಧ ಮುಖ. ಇವರ ಜೊತೆಗೆ ಗಿರಿಜಾ ಲೋಕೇಶ್, ದೊಡ್ಡಣ್ಣ, ಸುಂದರ್ ರಾಜ್. ನೀನಾಸಂ ಅಶ್ವತ್ಥರಂಥ ಅನುಭವಿ ಕಲಾವಿದರು ತಾರಾಗಣದಲ್ಲಿದ್ದಾರೆ. ಚಿಕ್ಕಮಗಳೂರಿನ ಪರಿಸರದಲ್ಲಿ ಕಾನೂರಾಯಣದ ಚಿತ್ರೀಕರಣ ನಡೆದಿದೆ. ವಾಸುಕಿ ವೈಭವ್ ಸಂಗೀತ ಚಿತ್ರಕ್ಕಿದೆ.

